ಕಳುಹಿಸಿಕೊಡುತ್ತೀರಿ. ಅವರು ಸಹ ದುಡ್ಡು ತೆಗೆದುಕೊಂಡು ಸರಿ ಇದೆ ಎಂದು ಬರೆದುಕೊಂಡು ಬರುತ್ತಾರೆ. ಇದು ಬಹಳ ನಾಚಿಕೆಗೇಡಿನ ಕೆಲಸ. ಈ ರೀತಿ ಆಗಬಾರದು.

ಅಧ್ಯಕ್ಷರು.—ಶ್ರೀ ಎಲ್. ಆರ್. ಶಿವರಾಮೇಗೌಡರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿರುವುದರಿಂದ ಮುಂದಿನ ಬುಧುವಾರ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧಿವೇಶನ ನಡೆಯುವುದಕ್ಕೆ ಪ್ರಾರಂಭವಾಗಿ ೧೪ ದಿವಸ ಆಯಿತು. ಇಷ್ಟು ಅವಧಿಯೊಳಗೆ ನನ್ನ ೮ ಪ್ರಶ್ನೆಗಳು ತಡೆಹಿಡಿಯಲಾಗಿದೆ, ಈಗ ನಾನು ಕೇಳಿರತಕ್ಕ ಪ್ರಶ್ನೆ ದೊಡ್ಡದಾಗಿದೆ. ಉಳಿದ ಪ್ರಶ್ನೆಗಳು ಚಿಕ್ಕದಾಗಿದ್ದರೂ ತಡೆಹಿಡಿಯಲಾಗಿದೆ. ಇದಕ್ಕೆ ಕಾರಣ ವೇನು ?

ಅಧ್ಯಕ್ಷರು.—ಈಗ ಶ್ರೀ ಪಿ. ಸಿ. ಸಿದ್ದನಗೌಡರ ಪ್ರಶ್ನೆ.

ಜಿಲ್ಲಾ ಪರಿಷತ್ತುಗಳಿಂದಾದ ನಿರ್ಣಯಂಗಳ ಬಗ್ಗೆ

೯೬೧ ಶ್ರೀ ವಿ. ಸಿ. ಸಿದ್ದನಗೌಡರ್(ಕಲಘಟಗಿ).—ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದ ಎಷ್ಟು ಜಿಲ್ಲಾಪರಿಷತ್ತುಗಳು ಕೆಟ್ಟಿರುವ ರಸ್ತೆಗಳನ್ನು ದುರಸ್ತಿಮಾಡಲು ಸಾಕಷ್ಟು ಹಣವಿಲ್ಲವೆಂದು ಸರ್ಕಾರದವರೇ ಈ ರಸ್ತೆಗಳ ದುರಸ್ತಿ ಮಾಡಬೇಕೆಂದು ನಿರ್ಣಯಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿವೆ ? (ಜಿಲ್ಲಾಪರಿಷತ್ತುಗಳ ಹೆಸರುಗಳ ಬಗ್ಗೆ ವಿವರ ಕೊಡುವುದು)

(ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು).—

(ಅ) ಯಾವುದು ಇಲ್ಲ;

(ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ, ಆದರೆ ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ "ಯಾವುದೂ ಇಲ್ಲ" ಉದ್ಭವಿಸುವುದಿಲ್ಲ ವೆಂದು ಉತ್ತರ ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, ಧಾರವಾಡ ಜಿಲ್ಲಾಪರಿಷತ್ತಿನಲ್ಲಿ ಒಂದು ರೆಸೆಲ್ಯೂಷನ್ ಮಾಡಿ ಸವಣೂರು ರಸ್ತೆಯನ್ನು ಪಿ.ಡಬ್ಲ್ಯೂ.ಡಿ.ಗೆ ಬಿಟ್ಟುಕೊಡುತ್ತೇವೆಂದು ಹೇಳಿದ್ದಾರೆ. ಜಿಲ್ಲಾಪರಿಷತ್ತಿನಲ್ಲಿ ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೆ ಹಣ ಇಲ್ಲದೇ ಇರುವುದರಿಂದ ಧಾರವಾಡ ಜಿಲ್ಲೆಯಲ್ಲಿರುವ ಸವಣೂರು ರಸ್ತೆಯನ್ನು ಪಿ.ಡಬ್ಲ್ಯೂ.ಡಿ. ಯವರು ತೆಗೆದುಕೊಳ್ಳ ಬೇಕೆಂದು ನಿರ್ಣಯ ಮಾಡಲಾಗಿದೆ, ಈ ರಸ್ತೆಯು ೩೦ ಕಿಲೋಮೀಟರ್ ಉದ್ದ ಇದೆ. ಈ ರಸ್ತೆ ಸರಿಯಿಲ್ಲ ಎನ್ನುವ ಕಾರಣಕ್ಕಾಗಿ ಧಾರವಾಡ ಜಿಲ್ಲೆಯ ಬಸ್‌ಗಳವರು ಸ್ಟ್ರೈಕ್ ಕೂಡ ಮಾಡಿದರು. ಆ ರಸ್ತೆಯಲ್ಲಿ ಒಂದು ಚಕ್ಕಡಿ ಗಾಡಿಯಲ್ಲಿ ಪೇಷಂಟನ್ನು ಹಾಕಿಕೊಂಡು ಬಂದರೆ ಹಾಸ್ಪಿಟಲ್ ಮುಟ್ಟುವ ಹಾಗೇ ಇಲ್ಲ. ಅಲ್ಲೇ ಹೋಗಿಬಿಡುತ್ತಾರೆ. ತಾಲ್ಲೂಕು ಮಟ್ಟದ ರಸ್ತೆಗಳು ಮತ್ತು ಡಿಸ್ಟ್ರಿಕ್ಟ್ ಮಟ್ಟದ ರೋಡ್‌ಗಳನ್ನು ಜಿಲ್ಲಾಪರಿಷತ್ತಿನವರು ದುರಸ್ತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಮಾನ್ಯ ಮಂತ್ರಿಯವರು ಕಂಡು ಹಿಡಿಯಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಬಗ್ಗೆ ಜಿಲ್ಲಾಪರಿಷತ್ತಿನಲ್ಲಿ ನಿರ್ಣಯ ಮಾಡಿಲ್ಲ. ಸರ್ಕಾರದವರೇ ಈ ರೋಡ್‌ಗಳ ಮೇನ್‌ಟಿನೆನ್ಸ್ ಮಾಡಿಕೊಳ್ಳಬೇಕೆಂದು ಅವರು ನಿರ್ಣಯ ಮಾಡಿಲ್ಲ. ಆದರೆ ಇಲ್ಲಿ ಪ್ರಶ್ನೆ ಏನಿದೆ ಎಂದರೆ, ರೋಡ್ಸ್‌ಗಳ ಮೇನ್‌ಟಿನೆನ್ಸ್‌ನಲ್ಲಿ ಬಹಳ ತೊಂದರೆ ಇದೆ. ಇದನ್ನು ನೀವು ಮೂಲಭೂತವಾಗಿ ಆರ್ಥ ಮಾಡಿಕೊಳ್ಳ ಬೇಕು. ಇದು ನಾನ್-ಪ್ಲಾನ್ ಸ್ಕೀಮ್‌ನಲ್ಲಿ ಬರುತ್ತದೆ. ಮತ್ತೆ ಎಷ್ಟು ರಸ್ತೆಗಳನ್ನು ಜಿಲ್ಲಾಪರಿಷತ್ತು ಗಳಿಗೆ ವಹಿಸಿಕೊಟ್ಟಿದ್ದೇವೆಯೋ ಅಷ್ಟರಮಟ್ಟಿಗೆ ಸರ್ಕಾರದವರು ಫಂಡ್ಸ್‌ನ್ನು ಕೊಟ್ಟಿಲ್ಲ. ಆ ಕಾರಣ ದಿಂದ ತೊಂದರೆಯಾಗಿದೆ. ಜವಾಬ್ದಾರಿ ಕೊಟ್ಟ ಪ್ರಮಾಣದಲ್ಲಿ ಫಂಡ್ಸ್‌ನ್ನು ಕೊಡಬೇಕಾಗಿತ್ತು. ಈಗ ಆದರ ಹೊಂದಾಣಿಕೆ ಆಗುವ ರೀತಿಯಲ್ಲಿ ಫಂಡ್ಸ್‌ನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಇದರ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ ನಮ್ಮ ಹಣಕಾಸಿನ ಮಂತ್ರಿಗಳ ಜೊತೆಗೆ ಚರ್ಚಿಸುತ್ತೇನೆ.

ಶ್ರೀ ಎಂ. ಮಹದೇವ್ .—ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೋಡ್ ಗಳಿಗೆ ಸಂಬಂಧಪಟ್ಟಂತೆ ಈ ಪ್ರಶ್ನೆ ಇದೆ.

ಅಧ್ಯಕ್ಷರು .—ಶ್ರೀ ಪೆರಿಕಲ್ ಮಲ್ಲಪ್ಪ.

(ಈ ಸಂದರ್ಭದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರುಗಳು ತಮ್ಮಷ್ಟಕ್ಕೆ ತಾವೇ ಮಾತನಾಡತೊಡಗಿದರು)

ಅಧ್ಯಕ್ಷರು .—ಆರ್ಡರ್, ಆರ್ಡರ್.

ಶ್ರೀ ಎಂ. ಮಹದೇವ್ .—ಮಾನ್ಯ ಅಧ್ಯಕ್ಷರೇ, ಒಂದು ಮನವಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೊಡ್‌ಗಳನ್ನು ಜಿಲ್ಲಾಪರಿಷತ್ತಿಗಳಿಗೆ ವಹಿಸಿಕೊಡಲಾಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ .—ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ ? ನಮ್ಮ ಪಕ್ಷದವರೇ ಆಗಿರಲಿ, ಬೇರೆ ಪಕ್ಷದವರೇ ಆಗಿರಲಿ ನಿಮ್ಮ ಅಪ್ಪಣೆ ಪಡೆದು ಮಾತನಾಡಬೇಕು.

ಅಧ್ಯಕ್ಷರು .—ಮಾನ್ಯ ಮಹದೇವ್ ಅವರೇ ಏನು ತಮ್ಮದು ?

ಶ್ರೀ ಎಂ. ಮಹದೇವ್ .—ಜಿಲ್ಲಾಪರಿಷತ್ತಿನ ವ್ಯಾಪ್ತಿಯೊಳಗೆ ಗ್ರಾಮಾಂತರ ಪ್ರದೇಶಗಳ ರಸ್ತೆಗಳು ಬರುತ್ತವೆ.

ಅಧ್ಯಕ್ಷರು .— ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ವ್ಯಾಪ್ತಿ ಬಗ್ಗೆ ಮಾತನಾಡುವುದಕ್ಕೆ ಡಿಪಾರ್ಟ್‌ಮೆಂಡ್ ಇದೆ. ಅದರ ಮೇಲೆ ಮಾತನಾಡಬಹುದು. ಈಗ ಪ್ರಶ್ನೋತ್ತರ ಸವರಯಿ.

ಮೆ. ಎಸ್. ಕೆ. ಸ್ಟೀಲ್ ಇಂಡಸ್ಟ್ರೀಸ್ ರವರು ಪೀಠೋಪಕರಣಗಳನ್ನು ಭಾರತ ಜನಸಂಖ್ಯಾ ಯೋಜನೆಗೆ ಸರಬರಾಜು ಮಾಡಿರುವ ಬಗ್ಗೆ

೧೦೪೭ ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) .—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(೧) ಭಾರತ ಜನಸಂಖ್ಯಾ ಯೋಜನೆ-೩(ಕ) ಬೆಂಗಳೂರು ಇವರಿಗೆ ಮೆ. ಎಸ್. ಕೆ. ಸ್ಟೀಲ್ ಇಂಡಸ್ಟ್ರೀಸ್, ಬೆಂಗಳೂರು ರವರು ಇದುವರೆಗೆ ಒದಗಿಸಿರುವ ಕಬ್ಬಿಣದ ಮಂಚಗಳು.

(೨) ಭಾರತ ಜನಸಂಖ್ಯಾ ಯೋಜನೆ-೩(ಕ) ವತಿಯಿಂದ ಕಬ್ಬಿಣದ ಮಂಚಗಳನ್ನು ಒದಗಿಸಿರುವ ಸ್ಥಳಗಳು.

(೩) ಮೇಲ್ಕಂಡ ಮಂಚಗಳನ್ನು ಕೊಡದಕ್ಕಾಗಿ ಭಾರತ ಜನಸಂಖ್ಯಾ ಯೋಜನೆ-೩(ಕ)ದ ವತಿಯಿಂದ ಕೊಟ್ಟಿರುವ ವರ್ಷವಾರು ಹಣದ ವಿವರ.

(೪) ಮೇಲ್ಕಂಡ ಮಂಚವನ್ನು ಕೊಳ್ಳಲು ಭಾರತ ಜನಸಂಖ್ಯಾ ಯೋಜನೆ-೩(ಕ) ವತಿಯಿಂದ ಕೊಟೇಷನ್ ಕರೆಯಲಾಗಿತ್ತೆ.